ಓ. ಎಸ್. ನಂಃ 81/2017
ಪಿ.ಡಬ್ಲ್ಯೂಃ 1

ದಿಃ 16-01-2020 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಸಿ. ಬಿ. ಪಿ. ಪ್ರತಿವಾದಿ ಪರ ವಕೀಲರಿಂದಃ

ದಾವಾ ಆಸ್ತಿಯ ವಿ.ಪಿ.ಸಿ. ನಂಃ 62 ಇರುತ್ತದೆ. ದಾವಾ ಆಸ್ತಿಯಲ್ಲಿ 2 ನೇ ವಾದಿ ಹಾಗೂ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಹಕ್ಕು ಇದೆ ಎಂದು ತೋರಿಸಲು ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಎಂದು ಆದರಿಸುತ್ತಿರುವ ಆಸ್ತಿಗೆ ನಾನು ಅಪರಿಚಿತ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಯಾವ ರೀತಿ ವಿಂಗಡನೆ ಆಗಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಸರ್ಕಾರದಿಂದ ಮನೆ ಮಂಜೂರು 2 ನೇ ವಾದಿಯ ಹೆಸರನಲ್ಲಿ ಆಗಿರುತ್ತದೆ. ಅದರ ಪ್ರಕಾರ ನಮಗೆ ಕಾಮಗಾರಿ ಆದೇಶ ಪತ್ರ ಕೊಟ್ಟಿದ್ದರು ಎಂದರೆ ಸರಿ. ಸದರಿ ಕಾಮಗಾರಿ ಆದೇಶ ಪತ್ರದಲ್ಲಿ ಕೆಲವೊಂದು ಕರಾರುಗಳನ್ನು ನೀಡಿರುತ್ತಾರೆ ಎಂದರೆ ಸರಿ. ಸದರಿ ಕರಾರುಗಳನ್ನು ಉಲ್ಲಂಘನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2 ನೇ ವಾದಿಯು ನ್ಯಾಯಾಲಯದಲ್ಲಿ ಬಂದು ಸಾಕ್ಷಿ ಹೇಳುತ್ತಾರೆ ಎಂದರೆ ಸರಿ.

2. ನಾನು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಪ್ರತಿವಾದಿಯ ವಿರುದ್ಧ ಮಧ್ಯಂತರ ಅರ್ಜಿಯನ್ನು ಅವರನ್ನು ತಡೆಯಲು ಹಾಕಿದ್ದೆ ಎಂದರೆ ಸರಿ. ಪ್ರತಿವಾದಿಯರ ಆಸ್ತಿಯ ವಿ.ಪಿ.ಸಿ. ನಂಬರ ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿಯರ ಆಸ್ತಿಯ ವಿ.ಪಿ.ಸಿ. ನಂಃ 66 ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಪ್ರತಿವಾದಿಯರ ಆಸ್ತಿಯ ಪಶ್ಚಿಮದ ಕಡೆಗೆ ವಿ.ಪಿ.ಸಿ. ಆಸ್ತಿ ನಂಃ 65 ರ ತಳವಾರ ಸಾಮೂಹಿಕ ಪಡಾ ಜಾಗೆ ಇದೇ ಎಂದರೆ ನನಗೆ ಗೊತ್ತಿಲ್ಲ. ವಿ.ಪಿ.ಸಿ. ಆಸ್ತಿ ನಂಃ 65 ರ ಪಶ್ಚಿಮಕ್ಕೆ ವಿ.ಪಿ.ಸಿ. ನಂಃ 64 ಇದೆ ಎಂದರೆ ಸರಿ. ವಿ.ಪಿ.ಸಿ. ಆಸ್ತಿ ನಂಃ 64 ರ ಪಶ್ಚಿಮಕ್ಕೆ ಹೂವಕ್ಕ ಕೋಂ ಭರಮಪ್ಪ ವಾಲ್ಮೀಕಿ ಇವರ ಅಸ್ತಿ ವಿ.ಪಿ.ಸಿ. ನಂಃ 63/2 ಇದೆ ಎಂದರೆ ಸರಿ. ಸದರಿ ಅಸ್ತಿಯ ಪಶ್ಚಿಮಕ್ಕೆ ಭರಮಪ್ಪ ತಂದೆ ಹನುಮಪ್ಪ ವಾಲ್ಮೀಕಿ ಇವರ ಅಸ್ತಿ ನಂಃ 63/1 ಇದೆ ಎಂದರೆ ಸರಿಯಲ್ಲ. ಭರಮಪ್ಪ ತಂದೆ ಹನುಮಪ್ಪ ವಾಲ್ಮೀಕಿ ಇವರ ಅಸ್ತಿ ನಂಃ 63/1 ರ ಪಶ್ಚಿಮಕ್ಕೆ ಶಿವಪ್ಪ ದತ್ತಕ ತಂದೆ ಕನಕಪ್ಪ ತಳವಾರ ಇವರ ಅಸ್ತಿ ನಂಃ 62/2 ರ ಇದೆ ಎಂದರೆ ಸರಿ. ಶಿವಪ್ಪ ದತ್ತಕ ತಂದೆ ಕನಕಪ್ಪ ತಳವಾರ ಇವರ ಅಸ್ತಿ ನಂಃ 62/2 ರ ಪಶ್ಚಿಮಕ್ಕೆ ದ್ಯಾಮವ್ವ ಕೋಂ ಶಂಕ್ರಪ್ಪ ದಾಸರ ಇವರ ಅಸ್ತಿ ನಂಃ 62/1 ಇದೆ ಎಂದರೆ ಸರಿ. ದ್ಯಾಮವ್ವ ಕೋಂ ಶಂಕ್ರಪ್ಪ ದಾಸರ ಇವರ ಅಸ್ತಿ ನಂಃ 62/1 ರ ಪಶ್ಚಿಮಕ್ಕೆ ಚನ್ನಬಸಪ್ಪ ಭರಮಪ್ಪ ಹುಬ್ಬಳ್ಳಿ ಇವರ ಅಸ್ತಿ ನಂಃ 61/ಬಿ ಇದೆ ಎಂದರೆ ಸರಿ. ಚನ್ನಬಸಪ್ಪ ಭರಮಪ್ಪ ಹುಬ್ಬಳ್ಳಿ ಇವರ ಅಸ್ತಿ ನಂಃ 61/ಬಿ ರ ಪಶ್ಚಿಮಕ್ಕೆ ವೀರಭದ್ರಯ್ಯ ಭರಮಪ್ಪ ಹುಬ್ಬಳ್ಳಿ ಇವರ ಆಸ್ತಿ ನಂಃ 61/ಎ ಇದೆ ಎಂದರೆ ನನಗೆ ಗೊತ್ತಿಲ್ಲ. ವೀರಭದ್ರಯ್ಯ ಭರಮಪ್ಪ ಹುಬ್ಬಳ್ಳಿ ಇವರ ಆಸ್ತಿ ನಂಃ 61/ಎ ರ ಪಶ್ಚಿಮಕ್ಕೆ ಬಸವಂತಪ್ಪ ತಳವಾರ ಹಾಗೂ ಅರ್ಜುನಪ್ಪ ತಳವಾರ ಇವರ ಅಸ್ತಿ ನಂಃ 60/2 ಇತ್ತು ಎಂದರೆ ಸರಿ. ಸದರಿ ಆಸ್ತಿಗಳು ವಿಂಗಡನೆ ಆಗಿ ಆಸ್ತಿ ನಂಃ 60/1 ಹಾಗೂ 60/2 ಆಗಿದ್ದವು ಎಂದರೆ ಸರಿ. ವಿ.ಪಿ.ಸಿ. ನಂಃ 60/1 ರ ಅಸ್ತಿಗೆ ನನ್ನ ಹೆಸರು ದಾಖಲು ಅಗಿರುತ್ತದೆ ಎಂದರೆ ಸರಿ. ವಿ.ಪಿ.ಸಿ ಆಸ್ತಿಗೆ 60/2 ರ 2 ನೇ ವಾದಿಯ ಹೆಸರು ದಾಖಲು ಆಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಪಶ್ಚಿಮಕ್ಕೆ ದ್ಯಾಮವ್ವ ಕೋಂ ಶಂಕ್ರಪ್ಪ ದಾಸರ ಆಸ್ತಿ ನಂಃ 59/ಬಿ ಇದೆ ಎಂದರೆ ಸರಿ. ಸದರಿ ಅಸ್ತಿಯ ಪಶ್ಚಿಮಕ್ಕೆ ಆಸ್ತಿ ನಂಃ 59/ಎ ರ ದ್ಯಾಮವ್ವ ಶಂಕ್ರಪ್ಪ ದಾಸರ ಇವರ ಅಸ್ತಿ ಇದೆ ಎಂದರೆ ಸರಿ. ಸದರಿ ಅಸ್ತಿಯ ಪಶ್ಚಿಮಕ್ಕೆ ಆಸ್ತಿ ನಂಃ 58 ತಿಪ್ಪಣ್ಣ ದ್ಯಾಮಣ್ಣ ತಳವಾರ ಇವರ ಅಸ್ತಿ ಇರುತ್ತದೆ ಎಂದರೆ ಸರಿ.

ಓ. ಎಸ್. ನಂಃ 81/2017
ಪಿ.ಡಬ್ಲ್ಯೂಃ 1

3. ದಾವಾ ಆಸ್ತಿಯ ವಿ.ಪಿ.ಸಿ. ನಂಃ 60/1 ಹಾಗೂ 60/2 ರ ನಿಜ ಸ್ಥಿತಿ-ಗತಿ ತೋರಿಸದೆ ಹಾಗೂ ಅಳತೆ ತೋರಿಸದೆ ನ್ಯಾಯಾಲಯಕ್ಕೆ ಖೊಟ್ಟಿ ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯನ್ನು ಸಲ್ಲಿಸಲು ಯಾವುದೇ ಕಾರಣ ಉಂಟಾಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪ್ರತಿವಾದಿಯರು ನನಗೆ ತೊಂದರೆ ಕೊಟ್ಟಿರುತ್ತಾರೆ. ಪ್ರತಿವಾದಿಯರು ಯಾವ ದಿನಾಂಕ, ತಿಂಗಳು ಹಾಗೂ ಇಸವಿಯೆಂದು ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನನ್ನ ಜಾಗೆಯಲ್ಲಿ ಮನೆ ಕಟ್ಟುತ್ತಿರುವಾಗ ಪ್ರತಿವಾದಿಯರು ತೊಂದರೆ ಕೊಟ್ಟಿರುತ್ತಾರೆ. ಆದರೆ ಯಾವ ದಿನಾಂಕ ತಿಂಗಳು ಹಾಗೂ ಇಸವಿಯಲ್ಲಿ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ವಾದ ಪತ್ರದಲ್ಲಿ ವಾದಿಯರು "ದಾವಾ ಅಸ್ತಿಗೆ ಹರಕತ್ತ ಮಾಡಬಾರದೆಂಬ ಉದ್ದೇಶದಿಂದ ಅವರ ಮೇಲೆ ನಿರಂತರ ತಾಕೀತಿ ಹುಕುಂ ಕೇಳಿ ಈ ದಾವೆ ಮಾಡುವ ಪ್ರಸಂಗ ಉಂಟಾಯಿತು ಎಂದು ಬರೆಸಿರುತ್ತೇನೆ" ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಟ್ಟ ಉದ್ದೇಶದಿಂದ ಅವರಿಗೆ ಪರಿಹಾರ ಕೊಡಬೇಕೆಂದು ಹೇಳುತ್ತಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು.)

ಓ ಹೆ ಕೆ ಸರಿ ಅದೆ.

ಸಹಿ/- 16-01-2020
ಸಿವಿಲ್ ನ್ಯಾಯಾಧೀಶರು, ಶಿಗ್ಗಾಂವ.